ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ — ೧೯

ಸಂಪುಟ ೧ ಸಂಚಿಕೆ ೨೪ ಕೊಪ್ಪ ೩೦-೧-೧೯೮೩ ಭಾನುವಾರ ಬೆಲೆ ೪೦ ಪೈಸೆ

"ವೈದ್ಯರ ಕಾಮ ದಾಹಕ್ಕೆ ಬಲಿಯಾದ" ಲಕ್ಷ್ಮಿಗೆ ಶ್ರದ್ಧಾಂಜಲಿ

ಬಡ ಹಳ್ಳಿಗರ ಉಗ್ರ ಪ್ರತಿಭಟನೆ

(ನಮ್ಮ ಪ್ರತಿನಿಧಿಯಿಂದ)

ಬೇಗಾರು: ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ದಾಖಲಾಗಿದ್ದಾಗ ಜ. ೪ರಂದು ವೈದ್ಯ ಎ.ಜಿ.ಹೆಗ್ಡೆಯಿಂದ ಅತ್ಯಾಚಾರದ ಹಲ್ಲೆಗೊಳಗಾಗಿ ಅನಂತರ ತೀರಿಕೊಂಡ ಬಡವಿ ಲಕ್ಷ್ಮಿಗೆ ಶ್ರದ್ಧಾಂಜಲಿ ಅರ್ಪಿಸುವ ಹಾಗೂ ಅತ್ಯಾಚಾರವನ್ನು ಪ್ರತಿಭಟಿಸುವ ಬೃಹತ್ ಮೆರವಣಿಗೆ ಮತ್ತು ಸಭೆ ಜ.೨೩ರಂದು ಇಲ್ಲಿ ನಡೆದವು.

ಸುತ್ತಮುತ್ತಲ ರೈತ ಯುವಕರು, ಬಡವರು ಸಂಘಟಿಸಿದ್ದ ಈ ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರ ಪೈಕಿ ಎ.ಎಂ. ಶ್ರೀಕಂಠ ಗೌಡ, ರಾಮಪ್ಪ ಹೆಗ್ಡೆ, ಸಿ.ಟಿ. ಸುರೇಂದ್ರ, ಹೆಚ್.ಬಿ.ಗಿಡ್ಡೇಗೌಡ, ಆನಂದೂರು ಜಗದೀಶ್ ಇವರುಗಳು ಮಾತ್ರ ಭಾಗವಹಿಸಿ, ಜನರನ್ನುದ್ದೇಶಿಸಿ ಮಾತನಾಡಿದರು.

ಹೊಸಗದ್ದೆಯಿಂದ ಬೇಗಾರು ಕೈಮರದವರೆಗೆ ಮೆರವಣಿಗೆಯ ನಂತರ ಬಿದರಗೋಡಿನಲ್ಲಿ ಸಭೆ ನಡೆಯಿತು. ಸುಮಾರು ೩೦೦ಕ್ಕೂ ಹೆಚ್ಚು ಜನ ಸೇರಿದ್ದರು.

ಬೇಡಿಕೆಗಳು

೧. ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು; ೨. ಎ. ಜಿ. ಹೆಗ್ಡೆಯನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಬೇಕು; ೩. ಪತ್ನಿಯ ದುಡಿಮೆಯಿಂದಲೇ (ಕೂಲಿ) ಜೀವನ ಮಾಡುತ್ತಿದ್ದ ಅಂಗವಿಕಲ ಚಿನ್ನನಾಯ್ಕರಿಗೆ ಸರ್ಕಾರದಿಂದ ಪರಿಹಾರ ಸಿಗಬೇಕು—ಇವು ಜನರ ಮುಖ್ಯ ಬೇಡಿಕೆಗಳಾಗಿದ್ದವು. ಇವು ಫೆಬ್ರವರಿ ೫ರೊಳಗೆ ಈಡೇರದಿದ್ದರೆ ಶೃಂಗೇರಿ ತಾ|| ಕಚೇರಿ ಎದುರು ಧರಣಿ ಹೂಡಲು ನಿರ್ಧರಿಸಲಾಯ್ತು. ಚಿನ್ನನಾಯ್ಕರಿಗಾಗಿ ಜನರಿಂದ ೩೧೩ ರೂ. ಸಂಗ್ರಹವಾಯಿತು.

ತೀರ್ಥಹಳ್ಳಿ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾದ ಜನತಾ ರಂಗದ ಡಿ.ಬಿ. ಚಂದ್ರೇಗೌಡ ಅವರು ರಾಜ್ಯ ವಿಧಾನ ಸಭೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಬೇಸಿಗೆ ಬೆಳೆ ಆಂದೋಳನ

ಕೆಸವೆ: ಜ. ೨೧ರಂದು ಪಂಚಾಯ್ತಿ ಅಧ್ಯಕ್ಷ ಕೆ.ಎಸ್. ಶಾಂತಾರಾಂರವರ ಅಧ್ಯಕ್ಷತೆಯಲ್ಲಿ ಬೇಸಿಗೆ ಬೆಳೆ ಆಂದೋಳನದ ಕಾರ್ಯಕ್ರಮ ಇಲ್ಲಿ ನಡೆಯಿತು. ಹಾಸನದ ಜಂಟಿ ಕೃಷಿ ನಿರ್ದೇಶಕ ಎ.ವಿ.ಕೊರ್ಕೆ ಉದ್ಘಾಟಿಸಿದರು. ಚಿಕ್ಕಮಗಳೂರಿನ ಪ್ರಧಾನ ಕೃಷಿ ಅಧಿಕಾರಿ ಎಫ್.ಜಿ. ನಾಗಸುಂದರಂ ಹಾಗೂ ಕೊಪ್ಪ ವಿಭಾಗ ಅರಣ್ಯಾಧಿಕಾರಿ ಕೆ.ಸುಂದರನಾಯ್ಕ್ ಮುಖ್ಯ ಅತಿಥಿಗಳಾಗಿದ್ದರು.

ಸ|| ಕೃಷಿ ನಿರ್ದೇಶಕ ಎಂ.ಎಸ್.ಸುಬ್ಬಯ್ಯಗೌಡ ಸ್ವಾಗತಿಸಿ, ಕೃಷಿ ಅಧಿಕಾರಿ ವೆಂಕಟಭಟ್ ವಂದಿಸಿದರು.

ಪರಿಶೀಲನೆ

ಜಂಟಿ ನಿರ್ದೇಶಕರು ಮತ್ತು ಪ್ರಧಾನ ಕೃಷಿ ಅಧಿಕಾರಿಗಳು ಕೊಪ್ಪದ ಸ|| ನಿರ್ದೇಶಕರ ಕಚೇರಿಯಿಂದ ತಾ||ನ ಗಿರಿಜನರಿಗೆ ಕೊಟ್ಟಿರುವ ಎತ್ತು, ಗಾಡಿ ಮುಂತಾದ ಸವಲತ್ತುಗಳನ್ನು ಪರಿಶೀಲಿಸಿದರು.

ಪುಟ್ಟ ಮಕ್ಕಳ ಮೇಲೆ ಮೋಟರ್ ಬೈಕ್ ಅಪಘಾತ

ಕೊಪ್ಪ: ಇಲ್ಲಿನ ಮುಖ್ಯರಸ್ತೆಯಲ್ಲಿ, ಪೇಟೆಯ ಮಧ್ಯದಲ್ಲಿ, ಜ.೨೫ರಂದು ಸಂಜೆ ಶಾಲೆಗಳನ್ನು ಬಿಟ್ಟ ಹೊತ್ತಿನಲ್ಲಿ ಮಿತಿ ಮೀರಿದ ವೇಗದಿಂದ ಧಾವಿಸುತ್ತಿದ್ದ ಸಿಎನ್‌ಹೆಚ್ ೪೧೮ ನಂಬರಿನ ಮೋಟರ್ ಬೈಕ್ ೪,೬ ವರ್ಷದ ಇಬ್ಬರು ಪುಟ್ಟಮಕ್ಕಳಿಗೆ ಅಪಘಾತ ಮಾಡಿತು. ಮಂಜುನಾಥ (೨೪) ಎಂಬವರಿಗೂ ಸ್ವಲ್ಪ ಗಾಯವಾಯಿತು. ಎಲ್ಲರಿಗೂ ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಜಯಪುರದ ಕಲಾಂ ಎಂಬವರು ಬೈಕ್ ಓಡಿಸುತ್ತಿದ್ದವರೆಂದು ತಿಳಿದು ಬಂದಿದೆ.

ಇದು ಬೇಗಾರು ಆಸ್ಪತ್ರೆ!

(ನಮ್ಮ ಪ್ರತಿನಿಧಿಯಿಂದ)

ಬೇಗಾರು: ಇಲ್ಲಿನ ಆಸ್ಪತ್ರೆಯಲ್ಲಿ ಒಂದು ವರ್ಷದಿಂದ ಹಾಜರಿ ಪುಸ್ತಕ ಇಟ್ಟಿಲ್ಲ.

ಈ ಆಸ್ಪತ್ರೆಗೆ ಗ್ರಾಮಾಂತರ ಜನಮಾನಸದಿಂದ ಯಾವ ಮೇಲಧಿಕಾರಿಯೂ ಭೇಟಿ ಕೊಟ್ಟಿಲ್ಲ. ಡಿಸೆಂಬರ್ ೪ರಿಂದೀಚೆಗೆ ರೋಗಿಗಳ ರಿಜಿಸ್ಟರ್ ಬರೆದಿಲ್ಲ. ವೈದ್ಯ ಎ.ಜಿ. ಹೆಗ್ಡೆ ಜ. ೪ರಿಂದ ನಾಪತ್ತೆ; ಹೋಗುವಾಗ ಯಾರಿಗೂ ಚಾರ್ಜ್ ವಹಿಸಿಲ್ಲ, ರಜೆಯನ್ನೂ ಹಾಕಿಲ್ಲ. ಜ. ೨೩ರ ಬೆಳಿಗ್ಗೆ ಮುಚ್ಚಿದ ಬಾಗಿಲು ೨೫ರ ಸಂಜೆಯಾದರೂ ತೆಗೆದಿರಲಿಲ್ಲ. ಇಲ್ಲಿ ಈಗ ಉಳಿದಿರುವ ಸಿಬ್ಬಂದಿಗೆ ಮುಂದೇನು? ಎಂಬುದು ಗೊತ್ತಿಲ್ಲ.

ಜಯಪುರ ಸರ್ಕಾರಿ ಆಸ್ಪತ್ರೆಯ

ಸಾಧನೆ

ಜಯಪುರ: ಇಲ್ಲಿನ ಪ್ರಾಥಮಿಕ ಆರೋಗ್ಯ ಘಟಕವು ಕುಟುಂಬ ಕಲ್ಯಾಣ ಯೋಜನೆಯಲ್ಲಿ ಈ ವರ್ಷ ಜಿಲ್ಲೆಗೇ ಪ್ರಥಮ ಸ್ಥಾನ ಗಳಿಸಿದೆ. ಕುಟುಂಬ ಕಲ್ಯಾಣ ಮತ್ತು ಬಾಣಂತಿ– ಮಕ್ಕಳ ಆರೋಗ್ಯಕ್ಕೆ ಸಂಬಂಧಪಟ್ಟ ಎಲ್ಲಾ ಯೋಜನೆಗಳಲ್ಲೂ ಗುರಿ ಮುಟ್ಟಲಾಗಿದೆ.

ಕುಟುಂಬ ಯೋಜನೆಯಲ್ಲಿ ಇಲ್ಲಿಗೆ ನಿಗದಿ ಮಾಡಿದ್ದ ೧೨೬ರ ಗುರಿಯನ್ನು ಕೇವಲ ೭ ತಿಂಗಳೊಳಗೇ ಸಾಧಿಸಿರುವ ಈ ಆಸ್ಪತ್ರೆ ಈಗಾಗಲೇ ೧೯೯ ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿದ್ದು, ಈ ವರ್ಷ ಕನಿಷ್ಠ ೨೦೦ರ ಗುರಿ ಮುಟ್ಟಬೇಕೆಂದು ಸಿಬ್ಬಂದಿ ನಿರ್ಧರಿಸಿರುವುದಾಗಿ ವೈದ್ಯಾಧಿಕಾರಿ ಡಾ|| ಹನುಮಂತ ರಾವ್ 'ಮುಂಜಾವು'ಗೆ ತಿಳಿಸಿದ್ದಾರೆ.

ಜನತಾ ಪಕ್ಷದ ಸಭೆಗೆ ಆಹ್ವಾನ

ಕೊಪ್ಪ ತಾಲ್ಲೋಕಿನ ಮಾನ್ಯ ಜನತಾ ಪಕ್ಷದ ಕಾರ್ಯಕರ್ತರೇ,

ಜನತಾ ಪಕ್ಷದ ಮುಖ್ಯ ವಿಷಯಗಳನ್ನು ಕುರಿತು ವಿಚಾರ ವಿನಿಮಯ ನಡೆಸುವ ಬಗ್ಗೆ **ತಾ|| 6-2-83ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಕೊಪ್ಪ ಪುರಭವನದಲ್ಲಿ** ಪಕ್ಷದ ಕಾರ್ಯಕರ್ತರ ಸಭೆ ಏರ್ಪಡಿಸಲಾಗಿದೆ. ತಾವುಗಳು ಇದನ್ನೇ ವೈಯಕ್ತಿಕ ಆಹ್ವಾನವೆಂದು ತಿಳಿದು ಕಾರ್ಯಕ್ರಮಕ್ಕೆ ಸಕಾಲದಲ್ಲಿ ದಯ ಮಾಡಿಸಿ ತಮ್ಮ ಸಹಕಾರವನ್ನು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಎ.ಬಿ.ವಾಸಪ್ಪ,
ಜನತಾ ಪಕ್ಷ,
ಕೊಪ್ಪ.

ತಾ|| 25-1-83.

ಕೃತಜ್ಞತೆಗಳು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಸಂಯುಕ್ತ ವಿರೋಧ ಪಕ್ಷಗಳ ಅಭ್ಯರ್ಥಿ **ಶ್ರೀಯುತ ಹೆಚ್.ಜಿ.ಗೋವಿಂದ ಗೌಡರನ್ನು** ಅತ್ಯಧಿಕ ಬಹುಮತದಿಂದ ಗೆಲ್ಲಿಸಿದ ಕ್ಷೇತ್ರದ ಎಲ್ಲಾ ಮತದಾರರಿಗೂ, ಹಗಲಿರುಳೂ ಶ್ರಮಿಸಿದ ಕಾರ್ಯಕರ್ತರಿಗೂ, ಮತ್ತು ಪ್ರತ್ಯಕ್ಷವಾಗಿ–ಪರೋಕ್ಷವಾಗಿ ಸಹಾಯ, ಸಹಕಾರ ನೀಡಿದ ಎಲ್ಲರಿಗೂ ಸಂಯುಕ್ತ ವಿರೋಧ ಪಕ್ಷಗಳ ಪರವಾಗಿಯೂ, ವೈಯಕ್ತಿಕವಾಗಿಯೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಳಿಗೆ ಚಂದ್ರಶೇಖರ್,
ಸಂಚಾಲಕ, ಸಂಯುಕ್ತ ವಿರೋಧ ಪಕ್ಷಗಳ ಚುನಾವಣಾ
ಪ್ರಚಾರ ಸಮಿತಿ, ಶೃಂಗೇರಿ ಕ್ಷೇತ್ರ.

ಈ ಸಲ ಎರಡೇ ಪುಟ ಏಕೆ?

ಆರ್.ಎಂ.ಎಸ್. ಎಂಬುದು ಅಂಚೆ ವ್ಯವಸ್ಥೆಯ ಹೃದಯವಿದ್ದಂತೆ. ಅಲ್ಲಿ ಒಂದೇ ಒಂದು ದಿನ ಪೂರ್ತಿ ಕೆಲಸ ನಿಲ್ಲುವುದು ಹಾಗಿರಲಿ, ಅರ್ಧಂಬರ್ಧ ಕೆಲಸ ನಡೆದರೂ ರಾಶಿ ಬೀಳುವ ಅಂಚೆಯನ್ನು ವಿಲೇವಾರಿ ಮಾಡಲು ಒಂದು ವಾರವೇ ಬೇಕಾಗುತ್ತೆ. ಅದಕ್ಕೇ ಇದು 'ಅಗತ್ಯ ಸೇವೆ'ಯ ಪಟ್ಟಿಯಲ್ಲಿದೆ (ಇಡೀ ಅಂಚೆ–ತಂತಿ ಇಲಾಖೆಯೇ.)

ಆದರೆ ಇಂಥ ಪ್ರಮುಖ ಸೇವೆಯಲ್ಲೂ ನೌಕರರ ಸ್ಥಿತಿ ದಾರುಣವಾಗಿದೆ. ಹಿಂದಿನ ಪಾಳೇಗಾರರ ಕಾಲದ ಗೊಡ್ಡು ಮನೋಭಾವದ ಜೊತೆಗೆ ಬ್ರಿಟಿಷರ ಕ್ರೌರ್ಯ, ಕುತಂತ್ರ, ವಕ್ರಬುದ್ಧಿ, ಸಣ್ಣತನಗಳನ್ನೆಲ್ಲ ಮೈಗೂಡಿಸಿಕೊಂಡಿರುವ ಅಧಿಕಾರಶಾಹೀ 'ಅತಿಬುದ್ಧಿವಂತರು' ಹಾಗೂ ಹೃದಯಹೀನ ಸರ್ಕಾರ ಇಲ್ಲಿನ ನೌಕರರ ಸಮಸ್ಯೆಗಳನ್ನು ಬಗೆಹರಿಸುವ ಬದಲಿಗೆ ಇನ್ನಷ್ಟು ಸಿಕ್ಕುಗೊಳಿಸುತ್ತ, ಅವರನ್ನು ಗುಲಾಮಗಿರಿಯ ಹತ್ತಿರ ಹತ್ತಿರ ಇಟ್ಟಿದ್ದಾರೆ; ಅವರಿಗೆ ಮುಷ್ಕರ ಅನಿವಾರ್ಯವಾಗುವಂತೆ ಮಾಡಿದ್ದಾರೆ.

ಇದೇ ಜ. ೩೧ರಿಂದ ಆರ್.ಎಂ.ಎಸ್. ಸಿಬ್ಬಂದಿ ಮುಷ್ಕರದ ನೋಟೀಸು ಕೊಟ್ಟಿದ್ದಾರೆ. ಆದ್ದರಿಂದ ೨೯ಕ್ಕೇ ನಮ್ಮ ಪತ್ರಿಕೆಯನ್ನು ಅಂಚೆಗೆ ಹಾಕಬೇಕಾದ್ದರಿಂದ 'ಮುಂಜಾವು' ಜ.೩೦ರ ಸಂಚಿಕೆ ಕೇವಲ ಎರಡೇ ಪುಟದಲ್ಲಿ ಜ.೨೯ಕ್ಕೇ ಪ್ರಕಟವಾಗುತ್ತಿದೆ. ೬ರ ಸಂಚಿಕೆ ಕ್ರಮವಾಗಿ ಪ್ರಕಟವಾಗುತ್ತದೆ. ಅಂಚೆ ವ್ಯವಸ್ಥೆ ಇನ್ನೂ ಸರಿಯಾಗಿದ್ದಲ್ಲಿ ಓದುಗರಿಗೆ ತಡವಾಗಿ ತಲುಪಬಹುದು, ಸಹಕರಿಸುತ್ತೀರಲ್ಲ? —ಸಂಪಾದಕ.

ವೇದಿಕೆ

ಯೋಜನೆಗಳು ಹಾಗೂ ಅವುಗಳ ಸಾಫಲ್ಯ

ಅಭಿವೃದ್ಧಿಶೀಲ ದೇಶಗಳಲ್ಲಿ ಸಮಗ್ರವಾದ, ಸರ್ವತೋಮುಖವಾದ ಪುರೋಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು "ಯೋಜನೆ"ಗಳು ಜಾರಿಯಲ್ಲಿರುವುದು ಸಹಜವಾಗಿದೆ. ಆದರೆ ಯಾವುದೇ ಯೋಜನೆ ಪೂರ್ಣವಾಗಿ ಉದ್ದೇಶವನ್ನು ಈಡೇರಿಸಿ ಸಫಲವಾಗುತ್ತಿಲ್ಲ; ಆಗಲು ಸಾಧ್ಯವೂ ಇಲ್ಲ. ಏಕೆಂದರೆ ಎಲ್ಲಾ ಯೋಜನೆಗಳೂ ಶೇಕಡ ನೂರರಷ್ಟು ಪರಿಪೂರ್ಣವಲ್ಲ. ಇಷ್ಟಾದರೂ ಪ್ರತಿ ವರ್ಷ ಬೇರೆ ಬೇರೆ ಯೋಜನೆಗಳ ಹುಟ್ಟು ಆಗುತ್ತಿರುತ್ತದೆ. ಸಾವು ನಡೆಯುತ್ತಿರುತ್ತದೆ.

ಯೋಜನೆಗಳೆಲ್ಲಾ ಉದ್ದೇಶಿತ ಸಫಲತೆಯನ್ನು ನಿರೀಕ್ಷಿಸಿಯೇ ಹುಟ್ಟಿರುತ್ತವೆಯಾದರೂ ಅದರಲ್ಲಿ, ಮುಂದೆ, ತಮ್ಮ ರಾಜಕೀಯ ಪಕ್ಷವು ಅಧಿಕಾರಕ್ಕೆ ಬರುವ ಸಂಚಿನ ಸ್ವಾರ್ಥ ಮುಖವೂ ಸಾಕಷ್ಟು ಕೆಲಸ ಮಾಡಿರುತ್ತದೆ. ಪ್ರಾಯಶಃ ಈ ಸ್ವಾರ್ಥ ತಪ್ಪೆಂದು ಯಾರೂ ಹೇಳಲಾರರು. ಆದರೆ ಈ ಸ್ವಾರ್ಥದಿಂದ ಸಾಮೂಹಿಕ ಪ್ರಜಾವರ್ಗದ ಅಭಿವೃದ್ಧಿ ಪ್ರಾಮಾಣಿಕವಾಗಿ ಆಗುತ್ತದೆಯೇ ಎಂಬುದರ ಹಿನ್ನೆಲೆಯಲ್ಲಿ ಯೋಚಿಸಿದಾಗ ಆಳವಾದ ಅಧ್ಯಯನ, ಸಫಲತೆಯ ಗರಿಷ್ಠತೆ ಹಾಗೂ ಕಾರ್ಯರೂಪದ ಪ್ರಾಮಾಣಿಕತೆಯನ್ನು ಯೋಚಿಸದೆಯೇ ಯೋಜನೆಗಳನ್ನು ರೂಪಿಸಿರುವುದು ಬೆಳಕಿಗೆ ಬಂದಿದೆ. ಇದು ಯೋಜನಾ ಆಯೋಗಗಳ ಕೆಲಸ ಮಾತ್ರವಾಗುವುದಿಲ್ಲ. ಕಾರ್ಯಾಂಗದ ಎಲ್ಲ ಇಲಾಖೆಗಳ ಜವಾಬ್ದಾರಿಯೂ ಹೌದು.

ಸಾಮಾನ್ಯವಾಗಿ ಯೋಜನೆಗಳು ಪೂರ್ಣ ಸಾಫಲ್ಯವನ್ನು ಪಡೆಯುವುದು ಕಾಲ, ಪರಿಸರ, ದೇಶೀಯತೆ, ಪ್ರಜಾವರ್ಗದ ಚಿಂತನೆಯ ದೃಷ್ಟಿಕೋನ ಮತ್ತು ಅನಿವಾರ್ಯತೆಗಳನ್ನು ಅವಲಂಬಿಸಿರುತ್ತದೆ. ಈ ಎಲ್ಲಾ ಅಂಶಗಳನ್ನು ಒಳಗೊಂಡ ರೂಪುರೇಷೆಗಳು ಯೋಜನಾ ಆಯೋಗದ ಮುಂದೆ ಬರುವುದಿಲ್ಲ. ಇವು ಸಾಮಾನ್ಯವಾಗಿ ಯೋಜನೆಗಳನ್ನು ಜಾರಿಗೆ ತರುವ ಇಲಾಖೆಗಳ ವರಿಷ್ಠರ ಮನೋಭಾವಕ್ಕನುಗುಣವಾಗಿ ಭ್ರಷ್ಟತೆಯ ಹಿನ್ನೆಲೆಯಿಂದಲೇ ರೂಪಿತವಾಗುತ್ತವೆಂದು ಅವು ಜಾರಿಗೆ ಬಂದಾಗ ಯಾವ ಸಾಮಾನ್ಯನಿಗೂ ಅರ್ಥವಾಗುತ್ತದೆ.

ಪ್ರಜಾಪ್ರಭುತ್ವ ಪದ್ಧತಿಯ ಆಡಳಿತದ ಸೂತ್ರಕ್ಕನುಗುಣವಾಗಿ ಕಾಲ, ಪರಿಸರ, ದೇಶಿಯತೆ, ಪ್ರಜೆಗಳ ಚಿಂತನೆಯ ದೃಷ್ಟಿಕೋನ ಮತ್ತು ಅನಿವಾರ್ಯತೆಗಳನ್ನು ಸಮಗ್ರವಾಗಿ ಪರಿಗಣಿಸಿ, ಯೋಜನೆಗಳನ್ನು ಜಾರಿಗೊಳಿಸಿದರೆ ಯೋಜನೆಗಳ ಗುರಿಗಳು ನೂರಕ್ಕೆ ನೂರರಷ್ಟಿಲ್ಲದಿದ್ದರೂ ತಕ್ಕಮಟ್ಟಿಗಾದರೂ ಸಾಧನೆಯಾಗುತ್ತವೆ. ಆದರೆ ಈಗ ಇರುವ ಪದ್ಧತಿಯಂತೆ ಯೋಜನೆಗಳನ್ನು ಮೇಲಿನಿಂದ ಹೇರುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು.

ನಮ್ಮಲ್ಲಿ ಈ ಚಿಂತನಶೀಲ ಪ್ರವೃತ್ತಿ ಇನ್ನೂ ಬೆಳೆಯಬೇಕಾಗಿದೆ. ಏಕೆಂದರೆ ಇಲಾಖಾ ವರಿಷ್ಠರು ರಾಜಕಾರಣಿಗಳ ನೆರಳಿನ ಹಿಡಿತಕ್ಕೊಳಗಾಗಿ ತಾವೇ ಪರಿಪೂರ್ಣರೆಂಬ ಭಾವನೆಯಿಂದ ನಡೆದುಕೊಂಡು ಯೋಜನೆಗಳನ್ನು ತಯಾರಿಸುತ್ತಾರೆ, ಜಾರಿಗೊಳಿಸುತ್ತಾರೆ. ಇದರ ಪರಿಣಾಮ ಜನಸಾಮಾನ್ಯರಿಗೆ ಈ ಯೋಜನೆಗಳ ರೂಪುರೇಷೆಗಳು ಅರ್ಥವಾಗದೆ ಅವು ಅವರನ್ನು ತಲುಪುವುದಿಲ್ಲ.

ಈ ಕಾರಣಕ್ಕಾಗಿ ಯೋಜನೆಗಳು ರೂಪುಗೊಳ್ಳುವುದರ ಮೊದಲು ಗ್ರಾಮ ಮಟ್ಟದಿಂದ ಅಭಿಪ್ರಾಯ, ಸಲಹೆಗಳನ್ನು ಸ್ವಾಗತಿಸಿ ತಾಲ್ಲೂಕು ಮಟ್ಟದಲ್ಲಿ ರೂಪಗೊಳಿಸಿ, ಜಿಲ್ಲಾ ಮಟ್ಟದಲ್ಲಿ ಅನುಸರಿಸುವಂತಾಗಬೇಕು. ಎಲ್ಲಾ ವಿಚಾರಗಳಲ್ಲಿ ಯಾರೂ ಪ್ರಜ್ಞರಲ್ಲವೆಂಬುದು ನಿರ್ವಿವಾದವಾದರೂ, ನಮ್ಮ ಗ್ರಾಮಗಳಲ್ಲಿ ದೂರದೃಷ್ಟಿ ಇರುವ ಮೇಧಾವಿ ಚಿಂತಕರಿದ್ದಾರೆ. ಇಲಾಖೆಗಳಲ್ಲಿ ಕೆಲಸ ಮಾಡುವ ಅತ್ಯಂತ ಪ್ರಜ್ಞಾವಂತ ಕ್ಷೇತ್ರಮಟ್ಟದ ಕಾರ್ಯಕರ್ತ ನೌಕರರಿದ್ದಾರೆ. ಇವರೆಲ್ಲರ ಅಭಿಪ್ರಾಯ, ಸಲಹೆ–ಸೂಚನೆಗಳನ್ನು ಆಮಂತ್ರಿಸಿ ಕ್ರೋಢೀಕರಿಸಿದ ಯೋಜನೆಗಳು ಪೂರ್ಣವಲ್ಲವಾಗಿಯೂ ಉದ್ದೇಶಿತ ಸಫಲತೆಯನ್ನು ಸಾಧಿಸಬಲ್ಲವು.

ಇದಕ್ಕೆ ಯಾವುದೇ ರಾಜಕೀಯ ಪಕ್ಷಗಳ ಕುತಂತ್ರದ ಸೋಂಕು ತಗಲಿರಬಾರದು. ಜೊತೆಗೆ ಪ್ರಜಾ ವರ್ಗವು ಅಭಿವೃದ್ಧಿ ಇಲಾಖೆಗಳಲ್ಲಿ, ಅಧಿಕಾರಿ ಇಲಾಖೆಗಳಿಗಿಂತ ಹೆಚ್ಚಿನ ಮಹತ್ವ ಹಾಗೂ ಸದ್ಭಾವನೆಯನ್ನು ಬೆಳೆಸಿಕೊಳ್ಳಬೇಕು, ಹಾಗೂ ಬೆಳೆಸಿಕೊಳ್ಳುತ್ತಾರೆ. ಹೀಗಾದಾಗ ಮಾತ್ರ ಭ್ರಷ್ಟ ರಾಜಕಾರಣಿಗಳ ಹಾಗೂ ಮೇಲ್ವರ್ಗದ ಅಧಿಕಾರಿಗಳ ಅಪಕ್ವ ಪರಿಸರ ಜ್ಞಾನವು ಯೋಜನೆಗಳನ್ನೂ, ದೇಶವನ್ನೂ ಹಾಳು ಮಾಡುವುದು ತಪ್ಪುತ್ತದೆ.

ಈಗಿನ ನಮ್ಮ ಕರ್ನಾಟಕ ಸರ್ಕಾರವಾದರೂ ಈ ನಿಟ್ಟಿನಲ್ಲಿ ಯೋಚಿಸಬಹುದೇ?, ಕಾದು ನೋಡೋಣ.

ರಾಮಚಂದ್ರ,

ವ್ಯಥಾಕಾಲಕ್ಷೇಪ

"ಎಲ್ಲರಿಗೂ ಲಾಭವಾಗುವ ವಿಚಾರ"

—ಲೇ. "ಸುಬ್ರಹ್ಮ"

ನಾನು ಎಲ್ಲರಿಗೂ ಲಾಭವಾಗುವ ಕೆಲವು ವಿಚಾರಗಳನ್ನು ಕಂಡುಹಿಡಿದಿದ್ದೇನೆ. ಇದನ್ನು ಅಷ್ಟು ಸುಲಭವಾಗಿ ನಿಮಗೆ ಹೇಳುತ್ತಿರಲಿಲ್ಲ; ಆದರೆ ನಾನು ಅವುಗಳ ಕಾಪಿ ರೈಟ್ (ಪೇಟೆಂಟ್ ಎನ್ನಬೇಕೆ?) ಪಡೆಯಲು ಸಾಧ್ಯವಿಲ್ಲವಾಗಿದೆ. ಏಕೆಂದರೆ ನಾನು ಹೇಳುವ ವಿಚಾರಗಳು ಸರ್ಕಾರಕ್ಕೆ ಹಿಡಿಸಲಾರವು (ವಿಚಾರವೆಂದರೇ ಸರ್ಕಾರಕ್ಕೆ ದ್ವೇಷ, ಅಲ್ಲವೇ?) ಆದರೆ ನೀವು ನನ್ನ ವಿಚಾರಗಳು ಸರಿಯಾದುದೆಂದು ಕಂಡುಕೊಂಡರೆ ಗೌರವಧನ (ರಾಯಲ್ಟಿ) ಸಲ್ಲಿಸಿ ನನ್ನನ್ನು ಅನುಷ್ಠಾನಕ್ಕೆ ತರಬಹುದು. ಆ ಮೇಲೆ ಆ ವಿಚಾರಗಳು ನನ್ನವಲ್ಲ; ನಿಮ್ಮವು. ಅದರಿಂದ ಬರುವ ಲಾಭಾಲಾಭಗಳಿಗೆ ನೀವೇ ಬಾಧ್ಯರು!

ನನ್ನ ಸಂಶೋಧನೆಯಿಂದ ಹೊರಪಟ್ಟ ವಿಚಾರಗಳು ಅನೇಕ ಕ್ಷೇತ್ರಗಳಿಗೆ ಸಂಬಂಧಿಸಿದವು. ಕೆಲವನ್ನು ಮಾತ್ರ ಇಲ್ಲಿ ಪ್ರಚಾರಕ್ಕಾಗಿ ಸ್ಯಾಂಪಲ್ಲಿಗೆ ಹೇಳುತ್ತೇನೆ. ಇನ್ನುಳಿದವು ನಿಮಗೆ ಬೇಕಾದರೆ ದಯಮಾಡಿ ಬರೆದು ತರಿಸಿಕೊಳ್ಳಿ. (ಬಲ್ಕ್ ಸರ್ಚೇಸಿಗೆ ಹೆಚ್ಚಿನ ರಿಯಾಯಿತಿ ಇದೆ!)

ನಂಬರ್ ಒಂದು:– ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಟಿಕೆಟ್ ತೆಗೆದುಕೊಳ್ಳಬೇಕಾದ್ದಿಲ್ಲ. ಹಾಗೆಂದು ಹಣ ಕೊಡಬೇಕಾದ್ದೂ ಇಲ್ಲ! ಏಕೆಂದರೆ ಬಸ್ ನಿಮಗಾಗಿಯೇನೂ ಹೋಗುತ್ತಿರುವುದಿಲ್ಲ. ನೀವು ಹೋಗದಿದ್ದರೂ ಬಸ್ ಹೋಗಲೇಬೇಕಾಗಿದೆ. ನೀವು ಬಸ್ ಹತ್ತಿದ್ದರಿಂದಾದ ಹೆಚ್ಚುವರಿ ಪೆಟ್ರೋಲಿನ ಖರ್ಚನ್ನು ಸರಿ ತೂಗಿಸುವ "ಆತ್ಮ" ನಿಮಗಿದ್ದರೆ, ೧೦–೧೨ ದಿನಕ್ಕೊಮ್ಮೆ ಟಿಕೆಟ್ ಕೊಂಡು ಋಣ ತೀರಿಸಬಹುದು. (ಸರ್ಕಾರಿ ಬಸ್ ಆದರೆ ಯಾವಾಗಲೂ ಕೊಳ್ಳಬೇಕಾದ್ದಿಲ್ಲ; ಏಕೆಂದರೆ ಅದರ ನಷ್ಟವನ್ನು ನೀವು ತೆರಿಗೆ ರೂಪದಲ್ಲಿ ಭರ್ತಿ ಮಾಡುತ್ತೀರಿ)

ನಂಬರ್ ಎರಡು:– ನೀವು ಕಳುಹಿಸುವ ಅಂಚೆ ಕವರಿಗೆ ಸ್ಟಾಂಪ್ ಅಂಟಿಸಬೇಕಾದ್ದಿಲ್ಲ. ನ್ಯಾಯವಾಗಿ ನಿಮ್ಮ ಪತ್ರದ ಉಪಯೋಗ ಇರುವುದು ನೀವು ಯಾರಿಗೆ ಬರೆಯುತ್ತೀರೋ ಅವರಿಗೆ. ಆದ್ದರಿಂದ ಅವರಿಂದ ವಸೂಲು ಮಾಡಬೇಕಾದ ಸ್ಟಾಂಪಿನ ಹಣವನ್ನು ನೀವೇಕೆ ಕೊಡುತ್ತೀರಿ?

ನಂಬರ್ ಮೂರು .... ಸದ್ಯಕ್ಕೆ ಇಷ್ಟೇ ಸಾಕು. ಎಲ್ಲ ಈಗಲೇ ತಿಳಿಸಿದರೆ, 'ರಾಯಲ್ಟಿ' ಚಕ್ರಹಾಕುವವರಿಗೆ ಸುಗ್ಗಿಯಾದೀತು. [ಅಂದಹಾಗೆ, ಈ ಬಗೆಯ ಜನರಿಗಾಗಿಯೂ, ಇವರಿಂದ ತಪ್ಪಿಸಿಕೊಳ್ಳ ಬಯಸುವವರಿಗೂ ಸಹ ನಮ್ಮಲ್ಲಿ ಹೊಸ ಹೊಸ ಸಲಹೆಗಳಿವೆ!]

ಹೆಚ್ಚಿನ ವಿವರಗಳಿಗೆ ನಮ್ಮ ಕೇಂದ್ರ ಕಛೇರಿಯನ್ನು ಸಂಪರ್ಕಿಸಿ.

"ಸುಬ್ರಹ್ಮ", ಆಲೋಚನಾ ತಂತ್ರಜ್ಞ,
"ವಿಚಾರ ನಗರಿ" ಅಂಚೆ ಕಛ್ಛ.

ಸೌರಶಕ್ತಿಯಿಂದ ಓಡುವ ಮಿನಿ ಬಸ್

ಸೌರಶಕ್ತಿಯ ನೆರವಿನಿಂದ ಓಡಬಲ್ಲ ಮಿನಿ ಬಸ್ ಒಂದನ್ನು ರಷ್ಯದ ತುರ್ಕಮೇನಿಯಾದ ವಿಜ್ಞಾನಿಗಳು ರೂಪಿಸಿದ್ದಾರೆ. ಇಂತಹ ಒಂದು ಮಾದರಿಯ ಮಿನಿಬಸ್ ತುರ್ಕಮೇನಿಯಾದ ರಾಜಧಾನಿ ಅಶ್ಖಾಬಾದ್‌ನ ರಸ್ತೆಯಲ್ಲಿ ಸಂಚರಿಸಲು ಆರಂಭಿಸಿದೆ. ಸೌರ ಶಕ್ತಿಯ ಸಹಾಯದಿಂದ ಓಡುವ ಈ ಅಪೂರ್ವ ಬಸ್ಸಿನ ಸೂರಿನಲ್ಲಿ ೭೦೦ ವ್ಯಾಟ್ ಸೌರಶಕ್ತಿಯ ಮಿನಿ ಸ್ಥಾವರವೊಂದನ್ನು ಅಳವಡಿಸಿದ್ದಾರೆ.

ವಿದ್ಯುತ್ತಾಗಿ ಪರಿವರ್ತಿಸಲ್ಪಟ್ಟ ಸೌರ ಊರ್ಜೆ ಬಸ್ಸಿನಲ್ಲಿರುವ ನಿಕ್ಕಲ್–ತವರದ ಬ್ಯಾಟರಿಗಳು ಸತತವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುತ್ತದೆ. ಸೌರಶಕ್ತಿಯಿಂದ ಓಡುವ ಬಸ್ ನಿಶ್ಶಬ್ದವಾಗಿ ಚಲಿಸುತ್ತದೆ. ವಾಯುವನ್ನು ಮಲಿನಗೊಳಿಸುವ ಹೊಗೆಯನ್ನು ಅದು ಉಗುಳುವುದಿಲ್ಲ. ಬ್ಯಾಟರಿಗಳು ಪೂರ್ತಿಯಾಗಿ ತಮ್ಮ ಶಕ್ತಿ ಸಾಮರ್ಥ್ಯವನ್ನು ವಿನಿಯೋಗಿಸಿದಾಗ ಮಿನಿ ಬಸ್ ೧೦೦ ಕಿ.ಮೀ.ವರೆಗೂ ಓಡಬಲ್ಲುದು.

ಸೌರ ತಂತ್ರಜ್ಞಾನದಲ್ಲಿ ವಿಶೇಷ ಪರಿಣತಿ ಹೊಂದಿರುವ ತುರ್ಕಮೇನಿಯಾದ ವಿಜ್ಞಾನಿಗಳು ಈ ವಿಶಿಷ್ಟ ಮಿನಿ ಬಸ್ಸನ್ನು ರೂಪಿಸಿದ್ದಾರೆ. ತುರ್ಕಮೇನಿಯಾದಲ್ಲಿ ವರ್ಷದ ೩೦೦ ದಿನಗಳಲ್ಲಿ ಸ್ವಚ್ಛವಾದ ಹವಾಮಾನವಿರುತ್ತದೆ. ಪ್ರತಿವಿದ್ಯುತ್ ಕೋಶಗಳ ಮೂಲಕ ಸೌರ ಊರ್ಜೆಯನ್ನು ವಿದ್ಯುತ್ತಾಗಿ ಪರಿವರ್ತಿಸಿ ಅದನ್ನು ಭಾರೀ ಬ್ಯಾಟರಿಗಳಲ್ಲಿ ದಾಸ್ತಾನು ಮಾಡಲಾಗುತ್ತದೆ. (ಸೌಜನ್ಯ: 'ಸೋವಿಯೆತ್ ಸಮಾಚಾರ')

ಮ ದು ವೆ

ಇದು ಯಾರಿಂದ ಸೃಷ್ಟಿಯಾದದ್ದು?
- ಯಾರ ಸುಖ–ಭೋಗಕ್ಕೆಂದು?
ನೂರಾರು ಹೆಂಗಳೆಯರನ್ನು ಬಲಿತೆಗೆದುಕೊಳ್ಳುವ ಯಾಗವಾದದ್ದು?
ವರದಕ್ಷಿಣೆಯ ಭೂತದ ಕಾವಲು ಬೇರೆ
ವಾಚು ಉಂಗುರ ಸೂಟುಬೂಟಿನ ಸಡಗರ ಜೋರೆ
ಇರುವುದೊಂದೆ ಬಲಿಪಶು ವಧುವಿನ ಕಣ್ಣೀರ ಧಾರೆ—
ಯಾರ ಸುಖಜೀವನಕ್ಕಲ್ಲ ಇದು ಮಾತ್ರ
ಯಾವುದೋ ಹೊತ್ತ ಹೊರೆಯನ್ನು ಇಳಿಸುವ ಆತುರ
ಹೆಣ್ಣೆಂದ ಮಾತ್ರಕ್ಕೆ ಯಾರಿಗೂ ಎಂದೂ ಹೊರೆಯಲ್ಲ ಪಡಬೇಡಿ ಆತುರ.
ಇದೆ ಎಲ್ಲರಂತೆ ಹಾಯಾಗಿ ಬದುಕುವ ಆಶೆ
ಮಾನವೀಯ ಬಾಳಿನ ಮಹಾ ಆಕಾಂಕ್ಷೆ.
ಆದದ್ದು ಸಾಕು ಮಾಡಬೇಡಿ ಮುಂದೆಂದೂ ಆಸೆನಿರಾಶೆ
"ಹದಿನೈದೇ ವರ್ಷಕ್ಕೆ ಮಗಳಿಗೆ ಮದುವೆ" ಎನ್ನುತಾರೆ ಹೊಗಳಿ
ಒಲ್ಲದ ಮನಸ್ಸಿಗೆ ಬಹು ಬಲಾತ್ಕಾರದ ತಾಳಿ
"ಮದುವೆ" ಎಂಬ ಮೂರಕ್ಷರದ ಬಂಧನದಲ್ಲಿ
ನವೆಯಬೇಕು ಬಡಬಾಳ ಬಾಳಿ

—'ಕಾಶಿ'